**ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂ: ಬಿ12(5)/ಪಿಆರ್/35/2020-21 ದಿನಾಂಕ: 21-09-2020 ರಂತೆ ದಿನಾಂಕ: 19-01-2021 ರಂದು ಹಗದೂರು ವಾರ್ಡ್ ಸಂ: 84ರ ವಾರ್ಡ್ ಕಮಿಟಿಯು ಡಾ॥ ಟಿ.ಎಂ.ರಮೇಶ್, ನೊಡಲ್ ಅಧಿಕಾರಿಗಳು, ರವರ ಅಧ್ಯಕ್ಷತೆಯಲ್ಲಿ ನಡೆದಿರುವ ಸಭೆಯ ನಡುವಳಿಗಳು:**

**ಹಾಜರಿದ್ದ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು**

1. **ನೊಡಲ್ ಅಧಿಕಾರಿಗಳು**
2. **ಸಹಾಯಕ ಕಾರ್ಯಪಾಲಕ ಅಭಿಯಂತರರು, ವೈಟ್‌ಫೀಲ್ಡ್ ಉಪವಿಭಾಗ, ಬಿ.ಬಿ.ಎಂ.ಪಿ ಬೆಂಗಳೂರು,**
3. **ಸಹಾಯಕ ಕಂದಾಯ ಅಧಿಕಾರಿಗಳು, ವೈಟ್‌ಫೀಲ್ಡ್ ಉಪವಿಭಾಗ, ಬಿ.ಬಿ.ಎಂ.ಪಿ ಬೆಂಗಳೂರು,**
4. **ಸಹಾಯಕ ಅಭಿಯಂತರರು, ವಾರ್ಡ್ ನಂ: 84 ಹಗದೂರು, ಬಿ.ಬಿ.ಎಂ.ಪಿ ಬೆಂಗಳೂರು,**
5. **ಹಿರಿಯ/ಕಿರಿಯ ಆರೋಗ್ಯ ನಿರೀಕ್ಷಕರರು, ವಾರ್ಡ್ ನಂ: 84 ಹಗದೂರು, ಬಿ.ಬಿ.ಎಂ.ಪಿ ಬೆಂಗಳೂರು,**
6. **ಹಗದೂರು ವಾರ್ಡಿನ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದವರು ಮತ್ತು ಸಾರ್ವಜನಿಕರರು,**

1. ಇಂಪಿರಿಯಲ್ ಹೋಟೆಲ್ ಬ್ರೂಕ್ ಬಾಂಡ್ ಆರೋಗ್ಯ ಅಧಿಕಾರಿಗಳು ನೋಟೀಸ್ ಕೊಟ್ಟಿರುತ್ತಾರೆ. ವೈಟ್‌ಫೀಲ್ಡ್ ಪೊಲೀಸ್ ಇಲಾಖೆಯವರಿಗೂ ಸಹ ಕ್ರಮ ವಹಿಸುವಂತೆ ತಿಳಿಸುವುದು.

   ಕ್ರಮ: ಸಹಾಯಕ/ಕಿರಿಯ ಆರೋಗ್ಯ ನಿರೀಕ್ಷಕರು,

2. ಗಾಂಧೀಪುರ 3ನೇ ಕ್ರಾಸ್ ಬೊರ್‌ವೆಲ್ ರಿಪೇರಿ ಆಗಿದ್ದು, ನೀರಿನ ಮೋಟರ್‌ನ್ನು ತೆಗೆದುಕೊಂಡು ಹೋಗಿರುತ್ತಾರೆ. ಇಲ್ಲಿ ಹೊಸ ಮೋಟರ್ ಅಳವಡಿಸಲಾಗಿದೆ.

   ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ ನಂ: 84,

3. ಹಗದೂರು ಮತ್ತು ಸುತ್ತಮುತ್ತಲಿನ ಸ್ಟ್ರೀಟ್‌ಲೈಟ್ ಉರಿಯದೆ ಇರುವುದು ಇದನ್ನು ಬೆಸ್ಕಾಂ ಅಧಿಕಾರಿಗಳು ಸರಿಪಡಿಸಲು ಕ್ರಮ ವಹಿಸಲಾಗುತ್ತಿದೆ.

   ಕ್ರಮ: ಸಹಾಯಕ ಅಭಿಯಂತರರು, ಬೆಸ್ಕಾಂ

4. ಉಡುಪಿ ಹೋಟೇಲ್ ಪಕ್ಕ ಬೀದಿ ದೀಪ ಸರಿಯಾಗಿ ಉರಿಯುತ್ತಿಲ್ಲದ ಕಾರಣ ದೂರು ಬಂದಿದ್ದು, ಇದನ್ನು ಸದರಿಪಡಿಸಲಾಗಿದೆ.

   ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿದ್ಯುತ್‌ಶಾಖೆ

5. ಬೋರ್‌ವೆಲ್ ರಸ್ತೆಯಲ್ಲಿ ಬೀದಿ ನಾಯಿಗಳ ಹಾವಳಿ ಇರುವುದರಿಂದ, ವಾರ್ಡ್‌ನಲ್ಲಿ ಬೀದಿ ನಾಯಿಗಳ ಹಾವಳಿ ತಪ್ಪಿಸಲು ಸಂಬಂಧಪಟ್ಟ ವೆಟನರಿ ಡಾಕ್ಟರ್ ರವರಿಗೆ ಸೂಕ್ತ ಕ್ರಮ ವಹಿಸಲು ತಿಳಿಸಲಾಯಿತು.

   ಕ್ರಮ: ವೆಟನರಿ ಡಾಕ್ಟರ್

6. ನಲ್ಲೂರಹಳ್ಳಿ-ಸಿದ್ದಾಪುರ ಸ್ಮಶಾನ ಹತ್ತಿರ ಬೀದಿ ದೀಪಗಳನ್ನು ಅಳವಡಿಸಲಾಗಿದೆ.

   ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿದ್ಯುತ್‌ಶಾಖೆ

7. ಹಗದೂರು ಪಶು ಆಸ್ಪತ್ರೆ ವಾರ್ಡ್ ಕಛೇರಿ ಇದ್ದು, ಹಗದೂರು ವಾರ್ಡ್‌ನಲ್ಲಿ ಪಶು ಆಸ್ಪತ್ರೆ ಇರಬೇಕೆಂದು ಗ್ರಾಮಸ್ಥರು ಮನವಿಯಂತೆ ಮಾನ್ಯ ನೋಡಲ್ ಅಧಿಕಾರಿ ರವರು ಖುದ್ದಾಗಿ ಈ ವಿಚಾರದ ಬಗ್ಗೆ ಕ್ರಮ ವಹಿಸುವುದಾಗಿ ತಿಳಿಸಿರುತ್ತಾರೆ.

   ಕ್ರಮ: ನೋಡಲ್ ಅಧಿಕಾರಿ/ವಾರ್ಡ್ ಇಂಜಿನಿಯರ್

8. ಶ್ರೀ.ನಾರಾಯಣಸ್ವಾಮಿ ಮತ್ತು ಶ್ರೀ.ಆಂಜಿನಪ್ಪ ಗುತ್ತಿಗೆದಾರರ ದೂರಿನ ಕುರಿತು- ಗಾಂಧೀಪುರ, ಇಮ್ಮಡಿಹಳ್ಳಿ, ನಾಗೊಂಡನಹಳ್ಳಿ ಹಾಗೂ ಹಗದೂರು ಗ್ರಾಮಗಳಲ್ಲಿ ನೀರಿನ ಸಮಸ್ಯೆ ಸರಿಪಡಿಸಲು ಸೂಚಿಸುವಂತೆ ವಾರ್ಡ್ ಇಂಜಿನಿಯರ್‌ಗೆ ಸೂಕ್ತ ಕ್ರಮ ವಹಿಸಲು ತಿಳಿಸಲಾಯಿತು.

ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ 84

9. ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಯ ಕೆಲಸದ ಬಗ್ಗೆ ಸಿದ್ದಾಪುರ ಮತ್ತು ವಾರ್ಡ್ ವ್ಯಾಪ್ತಯಲ್ಲಿ ತೊಂದರೆಯಾಗುತ್ತಿರುವುದರ ಬಗ್ಗೆ ದೂರು ನೀಡಿರುತ್ತಾರೆ. ಅದರಂತೆ ಸೂಕ್ತ ಕ್ರಮ ವಹಿಸುವಂತೆ ಸೂಚಿಸಲಾಯಿತು.

ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ

10. ಹಗದೂರು ಗ್ರಾಮದಲ್ಲಿ ಕುಡಿಯುವ ನೀರಿನ ಕೊಳವೆ ಬಾವಿ ಹತ್ತಿರ ಕೇಬಲ್ ಮತ್ತು ಪೈಪ್‌ಗಳು ಕಳ್ಳತನವಾಗಿರುವ ಬಗ್ಗೆ ದೂರು ನೀಡಿರುವ ಹಿನ್ನಲೆಯಲ್ಲಿ ಶ್ರೀ.ಎಂ.ಆಂಜಿನಪ್ಪ, ಗುತ್ತಿಗೆದಾರರು ನಾನು ಇದರ ಜವಬ್ದಾರನಲ್ಲವೆಂದು ತಿಳಿಸಿರುತ್ತಾರೆ.

ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ 84

11. ಕುಡಿಯುವ ನೀರಿನ ದುರಸ್ತಿ ಮತ್ತು ನೀರು ಸರಬರಾಜುದಾರರು ಸರಿಯಾಗಿ ನೀರು ಸರಬರಾಜು ಮಾಡದ ಬಗ್ಗೆ ದೂರಿನ ಹಿನ್ನಲೆಯಲ್ಲಿ ಕುಡಿಯುವ ನೀರಿನ ನಿರ್ವಹಣೆಯನ್ನು ಒಂದು ವಾರದೊಳಗೆ ಸರಿಪಡಿಸುವಂತೆ ಶ್ರೀ.ಪಿ.ನಾರಾಯಣಸ್ವಾಮಿ, ಗುತ್ತಿಗೆದಾರರಿಗೆ ತಿಳಿಸಲಾಯಿತು.

ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ 84

12. ಎ.ಸಿ.ಟಿ ಕೇಬಲ್, ರಿಲಯನ್ಸ್ ಕೇಬಲ್ ನವರು ರಸ್ತೆ ಅಗೆದು ಹಾಳು ಮಾಡುವ ಬಗ್ಗೆ ಗ್ರಾಮಸ್ಥರಿಂದ ದೂರು.

ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ 84

13. ಘನ ತ್ಯಾಜ್ಯ ಬೀದಿಯಲ್ಲಿ ಬಿಸಾಡುವ ಬಗ್ಗೆ ಮತ್ತು ಎಳನೀರು, ತೆಂಗಿನ ಸಿಪ್ಪೆಗಳನ್ನು ಎಲ್ಲಂದರಲ್ಲಿ ದಾರಿಯಲ್ಲಿ ಬಿಸಾಡಿ ಹೋಗುವ ಬಗ್ಗೆ ಕ್ರಮ ವಹಿಸಲಾಗಿದೆ.

ಕ್ರಮ: ಸಹಾಯಕ/ಕಿರಿಯ ಆರೋಗ್ಯ ನಿರೀಕ್ಷಕರ

14. ಗಾಂಧೀಪುರ 8ನೇ ಕ್ರಾಸ್‌ನಲ್ಲಿ ಕಲ್ವರ್ಟ್‌ನಲ್ಲಿ ಬ್ಲಾಕ್ ಆಗಿರುತ್ತದೆ ಕಾಂಕ್ರಿಟ್ ಹಾಕುವಾಗ ಕಾಂಕ್ರೀಟ್ ಸಿಮೆಂಟ್ ಬಿದು ಗಟ್ಟಿಯಾಗಿರುವುದರಿಂದ, ಇಲ್ಲಿ ದರಸ್ಥಿ ಆಗಿರುತ್ತದೆ. ಇದನ್ನು ಸರಿಪಡಿಸಲು ಕ್ರಮ ವಹಿಸಲಾಗುತ್ತಿದೆ.

ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ 84

15. ಗಾಂಧೀಪುರ ಬೆಸ್ಕಾಂ ಹಿಂಭಾಗ 3ನೇ ಕ್ರಾಸ್‌ನಲ್ಲಿ ಹೊಸ ಚರಂಡಿ ಮಾಡಿದ್ದು, ಸ್ಲಾಬ್ ಅಳವಡಿಸಲು ಕ್ರಮ ವಹಿಸಲಾಗುತ್ತಿದೆ.

ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ 84

16. ಗಾಂಧೀಪುರ ಬೆಸ್ಕಾಂ ಹಿಂಭಾಗ ಕಸ ತೆಗೆಯುವ ಬಗ್ಗೆ ದೂರು.

ಕ್ರಮ: ಸಹಾಯಕ/ಕಿರಿಯ ಆರೋಗ್ಯ ನಿರೀಕ್ಷಕರು

17. ಇಮ್ಮಡಿಹಳ್ಳಿ ಕೈತೋಟದ ಹತ್ತಿರದ ಬೋರವೆಲೆಗೆ ಮೋಟಾರು ರಿಪೇರಿ ಮಾಡಿಸುವುದು.

ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ 84

18. ಸಿದ್ದಾಪುರ ಗ್ರಾಮಕ್ಕೆ ಪೈಪ್ ಲೈನ್ ಮಾಡಿ ನೀರು ಒದಗಿಸುವುದು ಹಾಗೂ 2 ಹೂಸ ಮೋಟಾರು ಒದಗಿಸುವುದು

ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ 84

19. ಹಗದೂರು ವಾರ್ಡಿನಲ್ಲಿ ಬಿ.ಡಬ್ಲ್ಯು.ಎಸ್.ಎಸ್.ಬಿ ಇಲಾಖೆಯಿಂದ ಅಗೆದ ರಸ್ತೆಗಳನ್ನು ಸರಿಪಡಿಸಿ ಕೂಡುವುದುರ ಬಗ್ಗೆ ಹಾಗೂ ಬಿ.ಡಬ್ಲ್ಯು.ಎಸ್.ಎಸ್.ಬಿ ನವರು ಚೇಂಬರ್ ಸರಿಪಡಿಸಿ ಅಗೆದ ಮಣ್ಣು ರಸ್ತೆಯಲ್ಲಿಯೆ ಬಿಟ್ಟಿರುವುದನ್ನು ಸರಿಪಡಿಸುವುದು.

ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ

20. ಭೈರಪ್ಪ ಲೇಔಟ್,ವಿನಾಯಕ ನಗರ, ಅನ್ನಪೂರ್ಣಶ್ವರಿ ಕ್ಯಾಟರಿಂಗ್ ರೋಡ್ ಒಳಚರಂಡಿ ಸಮಸ್ಯೆ ದೂರು,

ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ

21. ಗಾಂಧೀಪುರ ಚರ್ಚ್ ಹತ್ತಿರ ಹೂಸದಾಗಿ ಚರಂಡಿ ನಿರ್ಮಾಣ ಮಾಡುವುದು.

ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ 84

22. ಹಗದೂರು ವಾರ್ಡನ ಅಂಗನವಾಡಿಯ ಕಟ್ಟಡದ ಹತ್ತಿರ ಕಸ ಹಾಕುವುದನ್ನು ತಡೆಗಟ್ಟುವುದು.

ಕ್ರಮ: ಸಹಾಯಕ/ಕಿರಿಯ ಆರೋಗ್ಯ ನಿರೀಕ್ಷಕರು

23. ಇಮ್ಮಡಿಹಳ್ಳಿ ಒಳ ಚರಂಡಿ ಪೈಪ್ ಲೈನ್ ಹಾಗೂ ಚೇಂಬರ್ ಕೆಲಸಕ್ಕೆ ಹಗೆದಿರುವ ಮಣ್ಣನ್ನು ಸಮತಟ್ಟುಗೂಳಿಸುವ ಬಗ್ಗೆ.

ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ

24.ಡೆಲ್ಲಿ ಪಬ್ಲಿಕ್ ಶಾಲೆಯ ಹತ್ತಿರ ಡಾಂಬಾರ್ ರಸ್ತೆ ಕುಸಿತದ ಬಗ್ಗೆ.

ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ 84

25.ಖಾಲಿ ಜಾಗದಲ್ಲಿ ಕಸ ಹಾಕುವುದನ್ನು ತಡೆಯಲು ವಾರ್ಡನ ಸುತ್ತಮುತ್ತಲಿನ ಜನರಿಗೆ ತಿಳಿ ಹೇಳುವ ಬಗ್ಗೆ ಹಾಗೂ ಕಸ ಹಾಕಿದವರ ವಿರುದ್ದ್ ದಂಡ ಹಾಕುವುದು.

ಕ್ರಮ: ಸಹಾಯಕ/ಕಿರಿಯ ಆರೋಗ್ಯ ನಿರೀಕ್ಷಕರು

26.ಸಪ್ತಪದಿ ಕಲ್ಯಾಣ ಮಂಟಪದ ಹತ್ತಿರ ಹೂಸ ಚರಂಡಿ ನಿರ್ಮಾಣದ ಬಗ್ಗೆ.

ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ 84

27.ಕಾವೇರಿ ಬೇಕರಿ ಹತ್ತಿರದ ಅಂಬುಜಾರವರ ಮನೆ ಹತ್ತಿರ ಹೂಸ ನೀರಿನ ಪೈಪ್ ಲೈನ್ ಮಾಡುವುದು

ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ 84

28.ರಾಮಗೋಂಡನಹಳ್ಳಿಯಲ್ಲಿ ಕಸ ವಿಂಗಡಣೆ ಮಾಡಲು ಜಾಗವನ್ನು ಸಿದ್ದಪಡಿಸುವುದು.

ಕ್ರಮ: ಸಹಾಯಕ/ಕಿರಿಯ ಆರೋಗ್ಯ ನಿರೀಕ್ಷಕರು

29.ವಿಜಯನಗರ 5 ನೇ ಕ್ರಾಸ್ ನಲ್ಲಿ ಹೂಸ ಕೇಬಲ್ ಮೋಟಾರ್ ಅಳವಡಿಸುವುದು.

ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ 84

30. ನಾಗೋಂಡನಹಳ್ಳಿ 1ನೆ ಅಡ್ಡ ರಸ್ತೆ ಅಗೆದಿದ್ದು ಸರಿಪಡಿಸುವುದು ಹಾಗೂ ಬೋರೆವೆಲ್‌ಗೆ ಮೋಟಾರ ಹಾಗೂ ಹೂಸ ಪ್ಯಾನೆಲ್ ಬೋರ್ಡ ಹಾಗೂ ಪಾರ್ಕ ಹತ್ತಿರ ಹೂಸ ಬೀದಿ ದೀಪ ಅಳವಡಿಸುವುದು.

ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ 84

31.ವಿಜಯನಗರ 5 ನೇ ಅಡ್ಡ ರಸ್ತೆಯಲ್ಲಿ ಹೂಸ ಪೈಪ್ ಲೈನ್ ನಿರ್ಮಿಸುವುದು ಹಾಗೂ ವಿಜಯನಗರ ದಿಂದ ನಾಗೋಂಡನಹಳ್ಳಿ ರಸ್ತೆಯಲ್ಲಿ ಹೂಸ ನೀರಿನ ಪೈಪ್ ಲೈನ್ ಅಳವಡಿಸುವುದು.

ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ 84

32.ವಿಜಯನಗರದಲ್ಲಿ ಸೊಳ್ಳೆಗಳ ಕಾಟ ನಿಯಂತ್ರಿಸುವ ಕ್ರಮ.

ಕ್ರಮ: ಸಹಾಯಕ/ಕಿರಿಯ ಆರೋಗ್ಯ ನಿರೀಕ್ಷಕರು

33. ನಲ್ಲೂರಹಳ್ಳಿ 3ನೇ &4ನೇ & 5ನೇ ಅಡ್ಡ ರಸ್ತೆ ಡಾಂಬರೀಕರಣ ಮಾಡಿಸಿವುದು.

ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ 84

34.ನಲ್ಲೂರಹಳ್ಳಿಯ ಚರಂಡಿಗಳ ಮೇಲೆ ಟಾಯಲೇಟ್ ನಿರ್ಮಿಸಿದ್ದು ತೆರೆವುಗೂಳಿಸುವುದು

ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ 84

35. ಗಾಂಧೀಪುರದ 1 ನೇ ಮುಖ್ಯರಸ್ತೆಯಲ್ಲಿ ಸಾರ್ವಜನಿಕರ ವಾಹನಗಳು ಪಾರ್ಕ ಮಾಡುವುದು ಹಾಗೂ ಬೀದಿ ವ್ಯಪಾರಿಗಳು ಅಂಗಡಿ ನಿಲ್ಲಿಸುತ್ತಿರುವುದನ್ನು ತೆರೆವುಗೂಳಿಸುವುದು ಹಾಗೂ ಸಮುದಾಯ ಭವನದ ಹತ್ತಿರ ಕಲ್ವರ್ಟ ನಿರ್ಮಿಸುವುದು.

ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ 84

36. ಗಾಂಧೀಪುರದ ಮುಖ್ಯರಸ್ತೆಯಲ್ಲಿ ಅನಧಿಕೃತ ಕೋಳಿ ಅಂಗಡಿಯನ್ನು ತೆರೆವುಗೂಳಿಸುವುದು.

ಕ್ರಮ: ಸಹಾಯಕ/ಕಿರಿಯ ಆರೋಗ್ಯ ನಿರೀಕ್ಷಕರು

**ವಾರ್ಡ್ ಕಮಿಟಿ ನೋಡಲ್ ಅಧಿಕಾರಿ ಮತ್ತು ಕಾರ್ಯದರ್ಶಿಗಳು, ನೌಕರರು, ಪದಾಧಿಕಾರಿಗಳು ಹಾಗೂ ಸಾರ್ವಜನಿಕರು ಈ ಮೇಲ್ಕಂಡಂತೆ ತಿಳಿಸಿರುವ ಸಭೆಯಲ್ಲಿ ಕೈಗೊಂಡ ತೀರ್ಮಾನದಂತೆ ಹಾಗೂ ನಿರ್ಣಯಗಳಂತೆ ಹಗದೂರು ವಾರ್ಡ್ ನಂ:84 ವ್ಯಾಪ್ತಿಯಲ್ಲಿ ಕೆಲಸ ಕಾರ್ಯಗಳನ್ನು ಆಧ್ಯತೆ ಮೇರೆಗೆ ನಿರ್ವಹಿಸಲು ಸೂಚಿಸಲಾಯಿತು,**

ಹಗದೂರು ವಾರ್ಡ ನಂ:84 ರ ವಾರ್ಡ್ ಕಮಿಟಿಯ ಕಾರ್ಯದರ್ಶಿಯವರಾದ ಡಾ॥ ಟಿ.ಎಂ.ರಮೇಶ್, ನೋಡಲ್ ಅಧಿಕಾರಿಗಳು, ರವರು ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ ಕಾರ್ಯನಿರ್ವಹಿಸಲು ಕೋರುತ್ತಾ, ವಂದನಾರ್ಪಣೆಯನ್ನು ಸಲ್ಲಿಸಿ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ಕಾರ್ಯದರ್ಶಿ**
**ಕಿರಿಯ ಅಭಿಯಂತರರು**
**ವಾರ್ಡ್ ನಂ: 84 ಹಗದೂರು**

**ಪ್ರತಿಯನ್ನು**

1. ಮಾನ್ಯ ಜಂಟಿ ಆಯುಕ್ತರು, ಬಿ.ಬಿ.ಎಂ.ಪಿ ಮಹದೇವಪುರ ವಲಯ,ರವರ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಮುಖ್ಯ ಅಭಿಯಂತರರು, ಬಿ.ಬಿ.ಎಂ.ಪಿ ಮಹದೇವಪುರ ವಲಯ,ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಮಾನ್ಯ ಡಿ.ಹೆಚ್.ಓ ಬಿ.ಬಿ.ಎಂ.ಪಿ ಮಹದೇವಪುರ ವಲಯ, ರವರ ಸೂಕ್ತ ಮಾಹಿತಿ/ಕ್ರಮಕ್ಕಾಗಿ ಸಲ್ಲಿಸಿದೆ.
4. ಎಲ್ಲಾ ಅಧಿಕಾರಿ ಸಿಬ್ಬಂದಿಗಳ ಕ್ರಮಕ್ಕಾಗಿ.
5. ಎಲ್ಲಾ ಕಮಿಟಿ ಸದಸ್ಯರುಗಳ ಮಾಹಿತಿಗಾಗಿ
6. ಕಛೇರಿ ಪ್ರತಿ.